ನಿರ್ಗತಿಕ ಅನಾಥ ಮಕ್ಕಳ ರಕ್ಷಣೆ

447- ಶ್ರೀ ಅಲ್ಲೂರ್ ಹೆಚ್.ಆರ್. (ಬಳ್ಳೊಳ್ಳಿ) : ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ನಿರ್ಗತಿಕ ಅನಾಥ ಮಕ್ಕಳ ರಕ್ಷಣೆ, ಪೋಷಣೆ ವಿದ್ಯಾಭ್ಯಾಸ ಮತ್ತು ಪುನರ್ ವಸತಿಗಾಗಿ ಸ್ವಯಂ ಸೇವಾ ಸಂಸ್ಥೆಗಳಿಗೆ ಪ್ರತಿ ವರ್ಷ ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ಒದಗಿಸುವ ಅನುದಾನ ಎಷ್ಟು?

ಆ) ಈ ಯೋಜನೆಯಡಿಯಲ್ಲಿ ಬಿಜಾಪುರ ಜಿಲ್ಲೆಯಲ್ಲಿ ಬೇನಾಮಿ ಸಂಸ್ಥೆಗಳಿಗೆ ಹಣ ಬಿಡುಗಡೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಶ್ರೀಮತಿ. ಮೋಟಮ್ಮ (ಮಾಹಿಳಾ ಮತ್ತು ಅಭಿವೃದ್ಧಿ ಸಚಿವರು) :

ಅ) ನಿರ್ಗತಿಕ ಅನಾಥ ಮಕ್ಕಳ ರಕ್ಷಣೆ ಪೋಷಣೆ, ವಿದ್ಯಾಭ್ಯಾಸ ಮತ್ತು ಪುನರ್‌ವಸತಿ ಕಾರ್ಯಕ್ರಮದ ಅನುಷ್ಟಾನಕ್ಕೆ ಸ್ವಯಂ ಸೇವಾ ಸಂಸ್ಥೆಗಳಿಗೆ ರಾಜ್ಯ ಸರ್ಕಾರದಿಂದ 1999-2000ನೇ ಸಾಲಿಗೆ ರೂ. 224.67 ಲಕ್ಷಗಳ ಅನುದಾನವನ್ನು ಜಿಲ್ಲಾ ಪಂಚಾಯತ್‌ನ ಆಯವ್ಯಯದಲ್ಲಿ ಒದಗಿಸಲಾಗಿದೆ. ಈ ಯೋಜನೆಯು ರಾಜ್ಯ ಸರ್ಕಾರದ ಯೋಜನೆಯಾಗಿದ್ದು, ಜಿಲ್ಲಾ ಪಂಚಾಯತ್‌ಗಳ ಮೂಲಕ ಅನುಷ್ಟಾನಗೊಳಿಸಲಾಗುತ್ತಿದೆ.

ಆ) ಇಲ್ಲ.

ಖುಷ್ಕಿ ಭೂ ಅಭಿವೃದ್ಧಿ ಮಂಡಳಿ

448 - ಶ್ರೀ ಹೆಚ್.ಆರ್. ಅಲ್ಲೂಗರ್ (ಬಳ್ಳೊಳ್ಳಿ) : ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಖುಷ್ಕಿ ಭೂ ಅಭಿವೃದ್ಧಿ ಮಂಡಳಿಗೆ (ಡಿಎಲ್‌ಡಿಬಿ) ಬಿಜಾಪುರ ಜಿಲ್ಲೆಗೆ ಇದುವರೆಗೂ ಪ್ರತ್ಯೇಕವಾಗಿ ಪ್ರತಿ ವರ್ಷ ಭೂಸಾರ ಸಂರಕ್ಷಣೆ, ಅರಣ್ಯ ಮತ್ತು ತೋಟಗಾರಿಕೆ ವಿಭಾಗಗಳಲ್ಲಿ ಖರ್ಚಾದ ಹಣವೆಷ್ಟು?

ಆ) ಈ ಕಾರ್ಯಕ್ರಮಗಳ ಭೌತಿಕ ಮತ್ತು ಆರ್ಥಿಕ ಮೌಲ್ಯ ಮಾಪನ ಮಾಡಲಾಗಿದೆಯೇ ಮಾಡಿದ್ದಲ್ಲಿ ಖರ್ಚಾದ ಹಣ ಸದುಪಯೋಗವಾದ ಬಗ್ಗೆ ಸರ್ಕಾರ ಪರಿಶೀಲಿಸಿದೆಯೇ?

ಇ) ಈ ಮಂಡಳಿಗೆ ಡಿಎಲ್‌ಡಿಬಿ ಯೋಜನೆಯೂ ಹೊರತಾಗಿ ಬೇರೆ ಯಾವ ಮೂಲಗಳಿಂದ ಹಣ ಬಿಡುಗಡೆಯಾಗುತ್ತದೆ?

ಈ) ಹೀಗೆ ಬೇರೆ ಬೇರೆ ಯೋಜನೆಗಳಡಿಯಲ್ಲಿ ಎಷ್ಟು ಹಣ ಬಿಡುಗಡೆಯಾಗಿದೆ?

ಉ) ಜಿಲ್ಲಾ ಪಂಚಾಯತ್‌ವತಿಯಿಂದ ವಿವಿಧ ಯೋಜನೆಗಳ ಅಡಿಯಲ್ಲಿ ಈ ಮಂಡಳಿಗೆ ಒಟ್ಟು ಬಿಡುಗಡೆಯಾದ ಹಣವೆಷ್ಟು?